## ನಾನವನಲ್ಲ; ಮಾನವನಲ್ಲ!

ಅ. 03ರ ಸಂಚಿಕೆಯ ಗುರುರಾಜ್ ಎಸ್. ಅವರ ಲೇಖನ, 'ನಾನವನಲ್ಲ; ಮಾನವನಲ್ಲ' ಚೆನ್ನಾಗಿತ್ತು. ನರಯಂತ್ರಗಳ ಸೃಷ್ಟಿಕಾರ್ಯನಿರತವಾಗಿರುವ ದೇಶಗಳ ಪೈಪೋಟಿಯಿಂದ ಮುಂಬರುವ ದಿನಗಳಲ್ಲಿ ಮಾನವ ತಾನೇ ಸೃಷ್ಟಿಸಿದ ನರಯಂತ್ರಗಳ ದೆಸೆಯಿಂದ ನಿರುದ್ಯೋಗದ ಪೆಡಂಭೂತವನ್ನು ಆಹ್ವಾನಿಸಿದರೂ ಆಶ್ಚರ್ಯವಿಲ್ಲ. ತಾತ್ವಿಕ ನೆಲೆಯಲ್ಲಿ ಲೇಖನವನ್ನು ಅಂತಿಮಗೊಳಿಸಿರುವುದು ಮೆಚ್ಚುಗೆಯಾಯಿತು.

—ವೀರಭದ್ರ ರಟ್ಟಿಹಳ್ಳಿ, ಹುಬ್ಬಳ್ಳಿ

'ನಾನವನಲ್ಲ ಮಾನವನಲ್ಲ!' ಮುಖಪುಟ ಲೇಖನ ಆರ್ಷಕವಾಗಿತ್ತು. ಅಚ್ಚರಿಯ ಸಂಗತಿಯೆಂದರೆ, 'ಕೃತಕ ಬುದ್ಧಿಮತ್ತೆ'ಯ ಫಲವಾದ ಈ ಯಂತ್ರಮಾನವರು ಮನುಷ್ಯನಂತೆಯೇ ಯೋಚಿಸುವ,ಗ್ರಹಿಸುವ ಸಾಮರ್ಥ್ಯ ಹೊಂದುವ ಮೂಲಕ ಜೀವಂತ ಮನುಷ್ಯನಿಗೇ ಸವಾಲಾಗುತ್ತಿರುವುದು! ಪರಿಣಾಮ, ವಿಶ್ವದ ಅರ್ಧಕ್ಕರ್ಧ ದೇಶಗಳು ಕೃತಕ ಬುದ್ಧಿಮತ್ತೆಯ ಉಪಯೋಗ ಪಡೆಯಲು ಸ್ಪರ್ಧೆಗೆ ಬೀಳುತ್ತಿವೆ. ಹಾಗಾದರೆ ಜೀವಂತ ಮನುಷ್ಯನ ಗತಿಯೇನು? ಗೋಲ್ಡ್ ಮೆಡಲಿಸ್ಟ್ ಡಿಗ್ರಿವಂತರ, ಬುದ್ಧಿವಂತರ ಪಾಡೇನು? ಪಂಡಿತ ಪಾಮರರ ಕಥೆಯೇನು? ಮುಂದೆ ಉದ್ಯೋಗ ಸೃಷ್ಟಿಸಬೇಕಾದುದು ಜೀವಂತ ಮನುಷ್ಯರಿಗೋ ಅಥವಾ ಯಂತ್ರಮಾನವರಿಗೋ?

—ವಿಠಲಗಟ್ಟಿ ಉಳಿಯ, ಮಂಗಳೂರು



## ಸ್ಟಾರ್‌ಗಳೇ ಬಳೆ ತೊಟ್ಕೊಳ್ಳಿ...

ಅ.10ರ ಸಂಚಿಕೆಯಲ್ಲಿ ಪದ್ಮನಾಭ ಭಟ್ ಬರೆದಿರುವ 'ಸ್ಟಾರ್‌ಗಳೇ ಬಳೆ ತೊಟ್ಕೊಳ್ಳಿ, ತಪ್ಪೇನಿಲ್ಲ!' ಲೇಖನ, ಸಿನಿಮಾ ಲೋಕದಲ್ಲಿ ನಡೆಯುತ್ತಿರುವ ಸ್ಟಾರ್‌ವಾರ್‌ಗಳ ಚಿತ್ರಣವನ್ನು ಕಟ್ಟಿಕೊಡುತ್ತದೆ. ನಮ್ಮಿಂದಲೇ, ಅಭಿಮಾನಿಗಳಿಂದಲೇ ಸ್ಟಾರ್ ಪಟ್ಟ ಪಡೆದ ಕಲಾವಿದರು ಬೇಕಾಬಿಟ್ಟಿ ಹೇಳಿಕೆಗಳನ್ನು ಕೊಡುತ್ತ, ತಮ್ಮ ವೈಯಕ್ತಿಕ ದ್ವೇಷಾಸೂಯೆಗಳನ್ನು ಟ್ವಿಟರ್‌ಗಳ ಮೂಲಕ ಹರಿಬಿಡುತ್ತಾರೆ. ಮುಗ್ಧ ಅಭಿಮಾನಿಗಳ ಮಧ್ಯದಲ್ಲಿ ವೈಮನಸ್ಸು ಬಿತ್ತಿ ಹೊಡೆದಾಟಕ್ಕೂ ಹಚ್ಚುತ್ತಾರೆ. ಜನಮಾನಸದಲ್ಲಿ ಉಳಿಯುವ ನಟರಾರೂ ಈ ರೀತಿಯಿಂದ ವರ್ತಿಸಲಾರರು. ಇತ್ತೀಚೆಗೆ ನಟ ದರ್ಶನ್ ಹಾಗೂ ಸುದೀಪ್ ಅವರ ಮಧ್ಯದ ಬೆಂಕಿ ಅಭಿಮಾನಿಗಳ ಮಧ್ಯದಲ್ಲೂ ನಿಗಿನಿಗಿ ಕೆಂಡವಾಗಿ ಉರಿಯುತ್ತಿದೆ. ಇದು ಎಷ್ಟರಮಟ್ಟಿಗೆ ಸರಿ? ಅಭಿಮಾನಿಗಳಿಗೆ ತಮ್ಮ ಇಷ್ಟದ ನಟನೇ ಎಲ್ಲ. ಅವನೇ ಸರ್ವಸ್ವ. ಅಂಥವರ ಎದೆಯಲ್ಲಿ ದ್ವೇಷ, ಕೋಪವನ್ನು ಬಿತ್ತುವ, ಇನ್ನೊಬ್ಬ ನಟನ ವಿರುದ್ಧ ಎತ್ತಿಕಟ್ಟುವ ಮಾತುಗಳನ್ನು ಬಹಿರಂಗವಾಗಿ ಆಡಿದರೆ ಏನಾದೀತು? ಇನ್ನಾದರೂ ಯೋಚಿಸಿ ಸ್ಟಾರ್‌ನಟರು ಅಭಿಮಾನಿಗಳ ಭಾವನಾತ್ಮಕ ವಿಷಯಕ್ಕೆ ನೋವನ್ನುಂಟು ಮಾಡುವ ಹೇಳಿಕೆಗಳನ್ನು ನಿಲ್ಲಿಸಬೇಕು.

—ರಾಜು ಹಗ್ಗದ, ಇಣಚಗಲ್



## ಎಚ್ಚರಗೇಡಿ ಜನಪ್ರತಿನಿಧಿಗಳು

ಅ. 3ರ ಸಂಚಿಕೆಯಲ್ಲಿ ಚ.ಹ. ರಘುನಾಥ ಅವರು 'ನಿರ್ಮೊಡನೆ' ಪುಟದಲ್ಲಿ ಹೇಳಿರುವಂತೆ ಇತ್ತೀಚಿನ ಸರ್ಕಾರಗಳದ್ದು ಹೆಸರು ಬದಲಿಸುವುದೇ ಸಾಧನೆಯಾಗಿದೆ. ಜನಪ್ರತಿನಿಧಿಗಳು ತಮ್ಮ ಜವಾಬ್ದಾರಿ ಮರೆತು ಮಾತನಾಡುತ್ತಿದ್ದಾರೆ. ಒಬ್ಬರು ನೆರೆಸಂತ್ರಸ್ತರಿಗೆ ಪರಿಹಾರ ₹10 ಸಾವಿರವೇ ಹೆಚ್ಚಾಯ್ತು ಅಂದ್ರೆ, ಮತ್ತೊಬ್ಬರು ಕೇಂದ್ರದ ನೆರವು ಅಗತ್ಯವಿಲ್ಲ ಎನ್ನುತ್ತಾರೆ. ಮಗದೊಬ್ಬರು ರಸ್ತೆಗಳು ಗುಣಮಟ್ಟದಿಂದ ಇರುವುದರಿಂದಲೇ ಅಪಘಾತವಾಗುತ್ತವೆ ಅನ್ನುತ್ತಾರೆ. ಎಲ್ಲರಿಗಿಂತ ಮುಂದೆ ಹೋದ ಸಚಿವರೊಬ್ಬರು ಮನೆ ಬಾಗಿಲಿಗೆ ಮದ್ಯ ಸರಬರಾಜು ಮಾಡುತ್ತೇವೆ ಎನ್ನುತ್ತಾರೆ. ಮುಖ್ಯಮಂತ್ರಿಗಳೇ 'ಎಲ್ಲದಕ್ಕೂ ನೋಟು ಪ್ರಿಂಟಿಂಗ್ ಮಾಡುವ ಮಿಷಿನ್ ಇಟ್ಟಿಲ್ಲ' ಎನ್ನುವಾಗ ನೆರೆ ಸಂತ್ರಸ್ತರು ಯಾರ ಬಳಿ ಹೋಗಿ ನೆರವು ಕೇಳೋದು? ಇದನ್ನೆಲ್ಲ ನೋಡಿದ್ರೆ ಜನಪ್ರತಿನಿಧಿಗಳ ಬೌದ್ಧಿಕ ಮಟ್ಟ ಏನೆಂದು ತಿಳಿಯುತ್ತದೆ.

—ದೆಗ್ಗನಹಳ್ಳಿ ಆನಂದ್, ಕೆ. ಆರ್. ನಗರ

## ಮೋಹನದಾಸನ ನೆನಪು

ಅ. 10ರ ಸಂಚಿಕೆಯಲ್ಲಿ 'ಮೋಹನದಾಸ ಸಿನಿಮಾ ನಾನೇಕೆ ಮಾಡಿದೆ?' ಎಂಬ, ಪಿ.ಶೇಷಾದ್ರಿ ಲೇಖನ ಚಿಂತನಶೀಲ. ಸಿನಿಮಾ ಲೋಕದಲ್ಲಿ ಗಾಂಧೀಜಿಯವರ ಬಾಲ್ಯವನ್ನು ಚಿತ್ರಿಸಿದ್ದು ವಿರಳ. ಅವರನ್ನು ಮಹಾತ್ಮರನ್ನಾಗಿ, ಸ್ವಾತಂತ್ರ್ಯ ಹೋರಾಟಗಾರರನ್ನಾಗಿ ಸತ್ಯದ ಪರಿಪಾಲಕರನ್ನಾಗಿ ಚಿತ್ರಿಸಿದ ಚಿತ್ರಗಳು ಕಾಣಸಿಗುತ್ತವೆ. ನಿರ್ದೇಶಕರು ಬೊಳುವಾರರ 'ಪಾಪು ಗಾಂಧಿ ಬಾಪು ಆದ ಕಥೆ' ಪುಸ್ತಕವನ್ನು ಆರಿಸಿಕೊಂಡದ್ದು ಸೂಕ್ತವೇ ಆಗಿದೆ. ಗಾಂಧೀಜಿಯ ಆದರ್ಶಗಳು, ಅವರು ನಡೆದ ಮಾರ್ಗ ಅಪ್ರಸ್ತುತ ಅನ್ನುವ ಸಂದರ್ಭದಲ್ಲಿ ಗಾಂಧೀಜಿ ಮತ್ತೆ ನಮ್ಮಲ್ಲಿ ಹುಟ್ಟುತ್ತಿರುವುದು ಆಶಾದಾಯಕ ಬೆಳವಣಿಗೆ. ಕಿರಿಯರಿಗೆ ಗಾಂಧಿಮಾರ್ಗವನ್ನು ಒಂದು ರಸ್ತೆಯ ಹೆಸರಿಗೆ ಮಾತ್ರ ಸೀಮಿತಗೊಳಿಸದೆ ಆದರ್ಶಮಾರ್ಗದತ್ತ ಸೆಳೆಯುವ ಒಂದು ಪ್ರಯತ್ನ ಎಂದು ಹೇಳಿದ ಲೇಖಕರ ಮಾತು ಗಮನೀಯ.

—ಕೆ.ಪಿ. ರಾಮಗುಂಡಿ. ಬೈಲಹೊಂಗಲ.

'ಮೋಹನದಾಸ' ಲೇಖನ ಓದಿದ ನಂತರ ಗಾಂಧೀಜಿಯವರ ಬಾಲ್ಯದ ಬಗ್ಗೆ ಆಸಕ್ತಿ ಹುಟ್ಟಿದೆ. ಒಂದು ಒಳ್ಳೆಯ ಪ್ರಯತ್ನ ಮಾಡಿದ್ದಾರೆ.

—ಸಿ.ಎಸ್. ಮುಕ್ತಾ

ಚಿಕ್ಕಂದಿನಿಂದಲೂ ಗಾಂಧಿ ಕಥೆಗಳನ್ನು ಓದಿ, ಕೇಳಿ ಬೆಳೆದ ನನಗೆ ಕೃಷ್ಣಾಹತೀಸಿಂಗ್ ಅವರು ಮಕ್ಕಳಿಗಾಗಿಯೇ ಬರೆದಿದ್ದ ಗಾಂಧೀಜಿಯವರ ಬಾಲ್ಯದ ಕಥೆ ಅಚ್ಚುಮೆಚ್ಚು. 'ಮೇಕಿಂಗ್ ಆಫ್ ಮಹಾತ್ಮ', ಅಟೆನ್ ಬರೋರವರ 'ಗಾಂಧಿ' ಹೀಗೆ ಗಾಂಧಿಯವರ ಬಗ್ಗೆ ಅನೇಕ ಸಿನಿಮಾಗಳು ಬಂದಿವೆ. ಆದರೆ ಇದುವರೆಗೂ ಯಾರೂ ಸಿನಿಮಾ ಮಾಧ್ಯಮದಲ್ಲಿ ಕಟ್ಟಿಕೊಡದ ಗಾಂಧಿಯವರ ಬಾಲ್ಯವನ್ನು ತೆರೆಗೆ ತರುತ್ತಿರುವ ಪಿ.ಶೇಷಾದ್ರಿಯವರಿಗೆ ಧನ್ಯವಾದಗಳು. ಗಾಂಧೀವಾದಿಯಾಗಿದ್ದ ನಮ್ಮ ತಂದೆಯವರ ಪ್ರಭಾವದಿಂದ ಗಾಂಧಿ ಒಂದು ದಂತಕಥೆಯಾಗಿ, ಆದರ್ಶ ಮಾನವರಾಗಿ ನಮ್ಮ ಜೀವನದಲ್ಲಿ ಹಾಸುಹೊಕ್ಕಾಗಿದ್ದಾರೆ.

—ಗೀತಾ ನೆಲ್ಲೀಕಾಯಿ

## ಉತ್ತಮ ಪ್ರಬಂಧ

ಅ.10ರ ಸಂಚಿಕೆಯಲ್ಲಿ ಸುಮಿತ್ರಾ ಎಲ್.ಸಿ. ಅವರ ಪ್ರಬಂಧ 'ಕಾಫಿ ಆಯ್ತಾ?' ಓದಿ ಬಾಲ್ಯದಲ್ಲಿ ನಾನು ಉಂಡೆ ಬೆಲ್ಲದ ಟೀ/ಕಾಫಿ ಕುಡಿದ ನೆನಪು ಮರುಕಳಿಸಿತು. ಕಡಿಮೆ ಕೊಟ್ಟಿದ್ದಕ್ಕೆ ಜಗಳ ಮಾಡಿದ್ದು, ಕೊನೆಗೆ ಒಂದು ಚರಿಗೆ ಕಾಫಿಯನ್ನು ನಾನೊಬ್ಬನೇ ಕುಡಿದ ಘಟನೆಗಳು ನೆನಪಾದವು.

—ಪ. ಚಂದ್ರಕುಮಾರ ಗೌನಹಳ್ಳಿ

## ಚಂದದ ಪದ್ಯ

ಅ. 3ರ ಸುಧಾ ಸಂಚಿಕೆಯ ಎಳೆಯರ ಅಂಗಳದಲ್ಲಿ ಸ್ಕಂದ ಆಗುಂಬೆಯವರ 'ಹಸಿರು ಪಾಠ' ಕವಿತೆ, ಇತ್ತೀಚೆಗೆ ನಡೆದ ಪ್ರಾಕೃತಿಕ ದುರಂತದ ಬಗ್ಗೆ ಅರಿವು ಮೂಡಿಸಿ, ಎಚ್ಚರಿಸುತ್ತಾ ಸುಂದರವಾಗಿ ಮೂಡಿಬಂದಿದೆ.

—ಚಂದ್ರಿಕಾ ಹೆಗಡೆ, ಮತ್ತಿಹಳ್ಳಿ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in